
ಅದು ಆಗಾಗ ನನ್ನ ಕಾಡುತ್ತಿತ್ತು. ದೇಹ ಒಂದು ಕಡೆ ಮನಸ್ಸು ಒಂದು ಕಡೆ ಎರಡನ್ನು ಒಟ್ಟಿಗೆ ಸೇರಿಸಲು ಹರಸಾಹಸ ಪಡುತ್ತಿದ್ದೆ. ಬಹುಶಃ ಅಂದು ನಾನು ಅಪ್ಪನ ಜೊತೆಗಿದ್ದಿದ್ದರೆ ಅವರನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬಹುದಿತ್ತೋ ಏನೋ...? ಯೋಚನೆಗಳು ತಾ ಮುಂದು ನಾ ಮುಂದು ಎಂಬಂತೆ ಮನದ ಮೋಡಕ್ಕೆ ಹನಿಗೂಡತೊಡಗಿದವು.

ಆಫೀಸು ಮುಗಿದೊಡನೆ ನೇರ ಕಾರನ್ನು ಮನೆಯ ಕಡೆ ತಿರುಗಿಸಿದೆ. ಹಾಗೇ ಹಾಸಿಗೆಯ ಮೇಲೆ ಉರುಳಿಕೊಂಡೆ. ದೇಹದ ಜೊತೆ ಮನಸ್ಸಿಗೂ ಸ್ವಲ್ಪ ವಿಶ್ರಾಂತಿ ಬೇಕೆನಿಸಿ ಆಮೇಲೆ ಊಟ ಮಾಡಿದರಾಯಿತು ಎಂದು ಒಂದು ಸಣ್ಣ ನಿದ್ರೆಗೆ ಜಾರಿದೆ. ಮನಸ್ಸು ಅಪ್ಪ... ಅಮ್ಮ... ತನ್ನ ಹುಟ್ಟೂರು ಹೀಗೆ ಹಳೆಯ ನೆನಪುಗಳನ್ನು ಮಗ್ಗಲು ಹಾಕುತ್ತಿತ್ತು. ಹಳೆಯ ಮಧುರ ನೆನಪುಗಳ ಜೊತೆ ಹೊಯ್ದಾಡುತ್ತಾ ಯಾವಾಗ ನಿದ್ರೆ ಹತ್ತಿತೋ ಅರಿವಾಗಲೇ ಇಲ್ಲ.

ಮಾಮೂಲಿನಂತೆ ಅಂದೂ ಕೂಡ ಬೇಗ ಎಚ್ಚರವಾಗಲಿಲ್ಲ. ಸಮಯ ನೋಡಿದೆ ಹತ್ತೂವರೆಯಾಗಿತ್ತು. ಮೊಬೈಲ್ ತೆಗೆದು ಗೆಳೆಯನಿಗೆ ಕಾಲ್ ಮಾಡಲು ನಂಬರ್ ಒತ್ತತೊಡಗಿದೆ. ಕಾಲ್ ರಿಸೀವ್ ಮಾಡಿದ ಗೆಳೆಯನಿಗೆ ಯಾಕೋ ಮೈಯಲ್ಲಿ ಹುಷಾರಿಲ್ಲದ ನೆಪವೊಡ್ಡಿ ಇಂದಿನ ಆಫೀಸಿನ ಕೆಲಸಗಳನ್ನು ನೀನೇ ನೋಡಿ ಕೊಳ್ಳುವಂತೆ ತಿಳಿಸಿ ಇನ್ನೊಂದಿಷ್ಟು ಹೊತ್ತು ಹಾಗೆಯೇ ಹಾಸಿಗೆಯ ಮೇಲೆ ಉರುಳಿದೆ. ಮನಸ್ಸು ಪೂರ್ತಿಯಾಗಿ ತನ್ನ ಊರನ್ನೇ ಜಪ ಮಾಡತೊಡಗಿತು. ಅದೇ ಕ್ಷಣಕ್ಕೆ ಮೊಬೈಲ್ ರಿಂಗಣಿಸತೊಡಗಿತು. ಅಮ್ಮನ ನಂಬರ್ ಊರಿನಿಂದ. ಕುತೂಹಲ ಗಾಬರಿಯಿಂದ ಕಾಲ್ ರಿಸೀವ್ ಮಾಡಿದೆ 'ಹಲೋ ವಿನಯ್... ನಾನು ಕಣೋ ಮಂಜು ಅಚಾನಕ್ಕಾಗಿ ನಾನು ನಿಮ್ಮ ಮನೆಯ ಮುಂದೆ ಹೋಗಬೇಕಾದರೆ ಯಾಕೋ ಅಮ್ಮ ತಲೆ ಸುತ್ತಿ ಬಾಗಿಲಲ್ಲಿ ಬಿದ್ದುಬಿಟ್ಟರು. ಮನೆಗೆ ತಂದು ಮಲಗಿಸಿದ್ದೇನೆ. ಪದೇ ಪದೇ ನಿನ್ನ ಹೆಸರನ್ನೇ ಹೇಳುತ್ತಿದ್ದಾರೆ.. ಬೇಗ ಬರ್ತೀಯಾ...? ಗೆಳೆಯನ ಫೋನು ನನ್ನನ್ನು ಆತಂಕಕ್ಕೆ ದೂಡಿತು. ಒಂಟಿಯಾಗಿದ್ದ ಅಮ್ಮನನ್ನು ನೆನೆದು ಹೃದಯ ಒದ್ದಾಡತೊಡಗಿತು. ಎಲ್ಲಿ ಈಗ ಮತ್ತೆ ಅಮ್ಮನನ್ನೂ ಕಳೆದುಕೊಂಡು ಬಿಡುವೆನೋ ಎಂಬ ಭಯದಲ್ಲಿ ಕಾರನ್ನು ಊರ ಕಡೆ ತಿರುಗಿಸಿದೆ.

* * *

'ಗಾಬರಿಯಾಗುವಂಥದ್ದು ಏನೂ ಇಲ್ಲ. ಏನೋ ಮನಸ್ಸಿಗೆ ಹಚ್ಚಿಕೊಂಡಿದ್ದಾರೆ. ಆಯಾಸದಿಂದ ಹೀಗಾಗಿದೆ. ಈ ಮೆಡಿಸಿನ್, ಕೊಡಿ ಎಲ್ಲಾ ಸರಿ ಹೋಗುತ್ತದೆ' ಡಾಕ್ಟರ್ ಹೇಳಿದಾಗ ಮನಸ್ಸು ನಿರಾಳವಾಯಿತು. ಅಪ್ಪ ಹೋದಾಗಿನಿಂದ ಅಮ್ಮ ಒಂದು ರೀತಿಯ ಖಿನ್ನತೆಗೆ ಒಳಗಾಗಿದ್ದರು ಅಂತ ನನಗೂ ಗೊತ್ತಿತ್ತು. ಆಸ್ಪತ್ರೆಯಿಂದ ಅಮ್ಮನನ್ನು ಮನೆಗೆ ಕರೆತಂದು ಹಾಸಿಗೆಯಲ್ಲಿ ಮಲಗಿಸಿದೆ. ಅವರು ಸುಧಾರಿಸಿ ಕೊಳ್ಳಲು ಒಂದೆರಡು ದಿನ ಬೇಕಾಯ್ತು. ನಾನು ಪಕ್ಕದಲ್ಲಿ ಇದ್ದುದರಿಂದಲೋ



ಏನೋ ಅಮ್ಮ ಮತ್ತೆ ಉತ್ಸಾಹದ ಚಿಲುಮೆಯಂತಾದರು. ಯಾಕೋ ಅವರನ್ನು ಬಿಟ್ಟು ಈಗಲೇ ನನಗೆ ಮತ್ತೆ ಬೆಂಗಳೂರಿಗೆ ಹೋಗಲು ಮನಸ್ಸಾಗಲಿಲ್ಲ. ಒಂದೆರಡು ವಾರ ಇಲ್ಲಿಯೇ ಕಳೆದು ಆಮೇಲೆ ಯೋಚಿಸೋಣ ಅಂತ ನಿರ್ಧಾರ ಮಾಡಿ ಹಾಗೆಯೇ ಹೊಲ ತೋಟದ ಕಡೆ ಅಡ್ಡಾಡಿಕೊಂಡು ಬರೋಣ ಅಂತ ಹೊರಟೆ.

ಹೀಗೆ ಹೋಗುತ್ತಿದ್ದಾಗ ದಾರಿಯಲ್ಲಿ ಬೈಕ್ ಸದ್ದಾಯಿತು ತಿರುಗಿ ನೋಡಿದೆ. ಪಕ್ಕದೂರಿನ ಮಹೇಶಪ್ಪ ನಮ್ಮ ಅಪ್ಪನ ವಯಸ್ಸಿಗಿಂತ ಸ್ವಲ್ಪ ಚಿಕ್ಕವರು. ನನ್ನನ್ನು ನೋಡಿದೊಡನೆ ಬೈಕ್ ನಿಲ್ಲಿಸಿದರು. ಅಪ್ಪ ಹಾಗೂ ಅವರ ನಡುವೆ ತುಂಬಾ ವಿಶ್ವಾಸದ ಸ್ನೇಹವಿತ್ತು. 'ಏನಪ್ಪಾ ವಿನಯ್.. ಯಾವಾಗ ಬಂದೆ ಊರಿಗೆ..?' ಅಪ್ಪ ಹೋದ ನಂತರ ಇದೇ ಅವರ ಹತ್ತಿರ ಮೊದಲ ಬಾರಿಗೆ ಮಾತನಾಡುತ್ತಿದ್ದೆ. ಅಪ್ಪ ಹುಷಾರು ತಪ್ಪಿದ ಸಂದರ್ಭದಲ್ಲಿ ಇವರೇ ಆಸ್ಪತ್ರೆಗೆ ಸೇರಿಸಿದ್ದರು. ಆನಂತರ ಅವರನ್ನು ಮಾತಾಡಿಸಿ ಕೃತಜ್ಞತೆ ಸಲ್ಲಿಸೋಣವೆಂದರೂ ಸಮಯ ಸಿಕ್ಕಿರಲಿಲ್ಲ. ಅದೂ ಇದೂ ವಿಚಾರ ಮಾಡುತ್ತಾ ಕೊನೆಗೆ ನಾನು ಅಂದಿನ ವಿಚಾರಕ್ಕೆ ಬಂದೆ. ಮಹೇಶಪ್ಪನವರು ಅಂದು ಅಪ್ಪ ಸತ್ತ ದಿನದ ವಿಚಾರ ಹೇಳುತ್ತಲೇ ನನಗೆ ನೋವು ಉಕ್ಕಿ ಬಂತು. ಅವರ ಒಂದೊಂದು ಮಾತು ನನ್ನನ್ನು ಚೂರಿಯಿಂದ ತಿವಿದಂತಾಯಿತು. ನನ್ನ ಹನಿಗೂಡಿದ್ದ ಕಣ್ಣುಗಳನ್ನು ನೋಡಿ ಅವರು 'ನಮ್ಮ ಕೈಲೇನಿದೆಯಪ್ಪಾ, ಎಲ್ಲಾ ದೈವೇಚ್ಛೆ...!' ಅಂತ ನನ್ನನ್ನು ಸಮಾಧಾನದ ನಾಲ್ಕು ಮಾತನಾಡಿ ಅಲ್ಲಿಂದ ಹೊರಟು ಹೋದರು.

ಆ ರಾತ್ರಿ ಪೂರ ನಾನು ನಿದ್ರೆ ಮಾಡಲಿಲ್ಲ. ನಿಜವಾಗಿಯೂ ಅಂದು ಅಪ್ಪ ಎಷ್ಟು ನೋವು ಅನುಭವಿಸಿರಬಹುದು. ಛೆ ರಸ್ತೆಯಲ್ಲಿ ಅನಾಥರಂತೆ ಬಿದ್ದಿದ್ದರಂತೆ! ಅಕಸ್ಮಾತ್ ಮಹೇಶಪ್ಪನವರು ಆ ವೇಳೆಯಲ್ಲಿ ಅಲ್ಲಿದ್ದುದರಿಂದ ಅವರು ಆಸ್ಪತ್ರೆಯಲ್ಲಿ ಜೀವ ಬಿಡುವಂತಾಯಿತು. ಇವರೇನಾದರೂ ಅಲ್ಲಿರದಿದ್ದರೆ ಅವರು ಅನಾಥ ಶವದಂತೆ ಅಲ್ಲೇ ರಸ್ತೆಯಲ್ಲೇ ಪ್ರಾಣ ಬಿಡಬೇಕಿತ್ತು. ಅಂದಿನ ಘಟನೆಯ ಜೀವಂತ ದೃಶ್ಯ ಕಣ್ಣ ಮುಂದೆ ಹಾಗೇ ಹಾದುಹೋದಂತೆಯೇ ಹೃದಯ ಹಿಂಡಿದಂತಾಯಿತು. ಅಪ್ಪನ ಕಳೇಬರ ಕಣ್ಣ ಮುಂದಿದ್ದರೂ ದುಃಖವನ್ನು ನುಂಗಿಕೊಂಡಿದ್ದನೇ ವಿನಃ ಇಷ್ಟೊಂದು ಅಳು ಬಂದಿರಲಿಲ್ಲ. ಎಲ್ಲಾ ಇದ್ದು ಅಸಹಾಯಕರಾಗಿ ಅನಾಥರಂತೆ ಅಪ್ಪನ ಅಂತ್ಯವಾಗಿದ್ದು ನನಗೆ ಆ ನೋವಿನ ಒತ್ತಡದಿಂದ ಆಚೆ ಬರಲಾಗಲಿಲ್ಲ.

ನಾನೇ ಹೀಗೆ ಇನ್ನು ಅಂದು ಒಬ್ಬಂಟಿಯಾಗಿದ್ದ ಅಮ್ಮ ಇದನ್ನೆಲ್ಲ ಹೇಗೆ ಸಹಿಸಿಕೊಂಡಿದ್ದಳು? ಅದೆಷ್ಟು ದುಃಖವನ್ನು ತನ್ನ ಎದೆಯೊಳಗೆ ಹುದುಗಿಸಿಟ್ಟುಕೊಂಡಿದ್ದಳು. ಯೋಚನೆ ಮಾಡಿದರೆ ತಲೆ ಗಿರ್ರನೆ ತಿರುಗುತ್ತಿತ್ತು. ಮುಂದೆ ನಾನು ಮತ್ತೆ ಬೆಂಗಳೂರಿಗೆ ಹೊರಟುಹೋದರೆ ಅಮ್ಮನ ಗತಿ?

ಈ ಭೂಮಿ ಆ ಭಾನು ಬೆಟ್ಟಗುಡ್ಡಗಳು ಮತ್ತೆ ಹೊಸದಾಗಿ ಕಾಣಲಾರಂಭಿಸಿದವು. ಹೌದು ನನ್ನೂರಿನ ತುಂಬಾ ಮತ್ತದೇ ಅದೇ ಹಳೆಯ ಮಧುರ ಘಟನೆಗಳು ನಲಿದಾಡುವಂತಾಗಬೇಕು. ನಮ್ಮ ಮನೆಯ ಮೂಲೆಯಲ್ಲಿ ರಾಶಿ ರಾಶಿ ದವಸ ಧಾನ್ಯಗಳ ಮೂಟೆಗಳು ಬೀಳುವಂತಾಗಬೇಕು. ಹೊಲ ಗದ್ದೆ ತೋಟಗಳು ಹಸಿರು ಸೀರೆಯ ಹೊದ್ದ ಹರೆಯದ ಹೆಣ್ಣಿನಂತೆ ಬಳುಕಾಡುತ್ತಿರಬೇಕು. ಯಾವುದೋ ಧಾನ್ಯಗಳ ಮೂಟೆಗಳು ಬೀಳುವಂತಾಗಬೇಕು. ಹೊಲ ಗದ್ದೆ ತೋಟಗಳು ಹಸಿರು ಸೀರೆಯ ಹೊದ್ದ ಹರೆಯದ ಹೆಣ್ಣಿನಂತೆ ಬಳುಕಾಡುತ್ತಿರಬೇಕು. ಯಾವುದೋ ಒಂದು ದಿವ್ಯಶಕ್ತಿ ನನ್ನೊಳಗೆ ಹಾದು ಹೋದಂತಾಯಿತು. ಒಮ್ಮೆ ಅಮ್ಮನ ಮುಖ ನೆನೆಸಿಕೊಂಡೆ. ಸುತ್ತಲೂ ಹರಡಿರುವ ಭುವಿಯನ್ನು ನೋಡಿದೆ. ಮನದಲ್ಲಿ ಧೃಡ ನಿರ್ಧಾರವೊಂದು ನೆಲೆ ಕಂಡಂತಾಯ್ತು. ಆ ಪರಿಸರದಲ್ಲಿ ಹಸಿರಿನಿಂದ ಕಂಗೊಳಿಸುತ್ತಿರುವ ನನ್ನ ಕನಸಿನ ಕಂಪೆನಿಯನ್ನು ಕಂಡೆ. ವೃದ್ಧಾಶ್ರಮದಂತೆ ಬೀಡು ಬಿಟ್ಟಿರುವ ಹಳ್ಳಿಯಲ್ಲಿ ಮತ್ತೆ ನನ್ನ ಬಾಲ್ಯದ ಗೆಳೆಯರನ್ನು ಕಂಡೆ. ಮತ್ತೆ ನಾನು ವಾಪಸ್ಸು ಹೋಗಿ ಅಮ್ಮನನ್ನು ಕಳೆದುಕೊಳ್ಳಲು ತಯಾರಿರಲಿಲ್ಲ. ಮನಸ್ಸು ಹಗುರಾಗಿ ಗುರಿಯು